**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ:16**

**ಎಸ್.ಸಿ. ಸಂಖ್ಯೆ:501/23 ಹೆಚ್ಚುವರಿ ಸಾಕ್ಷಿ-1**

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾ: ರಶ್ಮಿ ಡಿ ಎಸ್ |
| ಗಂಡನ ಹೆಸರು | : | ಡಾ: ಅರವಿಂದ ಕೆ ವಿ |
| ವಯಸ್ಸು | : | 47 |
| ವೃತ್ತಿ | : | ಸೀನಿಯರ್ ಸ್ಪೆಷಲಿಷ್ಟ ಜೆ ಸಿ ಆಸ್ಪತ್ರೆ ತೀರ್ಥಹಳ್ಳಿ |
| ವಾಸ | : | ತೀರ್ಥಹಳ್ಳಿ |

**ದಿನಾಂಕ: 05-06-2026** ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ನಾನು ದಿನಾಂಕ:27-08-2018 ರಿಂದ 30-11-2022 ವರೆಗೆ ಸರಕಾರಿ ವೆನ್‌ಲಾಕ್ ಆಸ್ಪತ್ರೆ ಮಂಗಳೂರಿನಲ್ಲಿ ಸೀನಿಯರ್ ಸ್ಪೆಷಲಿಷ್ಟ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ:19-09-2022 ರಂದು ನಾನು ವೆನ್ ಲಾಕ್ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸಾ ವಿಭಾಗದಲ್ಲಿ ಕರ್ತವ್ಯದಲ್ಲಿದ್ದಾಗ ರಾತ್ರಿ 11.15 ಗಂಟೆಗೆ ಪಾರ್ವತಿ ಎನ್ನುವ ಗಾಯಾಳುವನ್ನು ಅವರ ಮಗ ಚಿಕಿತ್ಸೆಗಾಗಿ ಕರೆದುಕೊಂಡು ಬಂದಿದ್ದು, ಅವಳು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದು ಆಕೆಯನ್ನು ನಾನು ಪರೀಕ್ಷೆ ಮಾಡಿದಾಗ ಅವಳ ತಲೆಯ ಎಡಬದಿಯಲ್ಲಿ 4 2 ಸೆಂ.ಮೀ. ಗಾತ್ರದ ಸೀಳಿದ ಗಾಯ ಕಂಡು ಬಂದಿತು ಮತ್ತು ಅವಳ ಎಡ ಕಣ್ಣಿನ ಭಾಗವು ಕಪ್ಪಾಗಿತ್ತು. ಅವಳನ್ನು ಕರೆದುಕೊಂಡು ಬಂದ ಅವಳ ಮಗ ಪವನ್ ಗಾಯಾಳು ಅಮಲು ಪದಾರ್ಥ ಸೇವಿಸಿ ಆಯ ತಪ್ಪಿ ಬಿದ್ದು ಪೆಟ್ಟು ಮಾಡಿಕೊಂಡಿದ್ದಾಳೆ ಅಂತ ತಿಳಿಸಿದ. ನಂತರ ನಾನು ಗಾಯಾಳುವನ್ನು ಮುಂದಿನ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಯ ಶಸ್ತ್ರ ಚಿಕಿತ್ಸಾ ಮತ್ತು ನರರೋಗ ವಿಭಾಗಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಸದ್ರಿ ವಿಷಯದ ಮಾಹಿತಿಯನ್ನು ಸಂಬಂಧಪಟ್ಟ ಠಾಣೆಗೆ ರವಾನಿಸಿದ್ದೇನೆ. ನಂತರ ನಾನು ದಿನಾಂಕ:05-01-2023 ರಂದು ಗಾಯಾಳುವಿನ ವರದಿಯನ್ನು ಸಂಬಂಧಪಟ್ಟ ಶಸ್ತ್ರ ಚಿಕಿತ್ಸಾ ಮತ್ತು ನರರೋಗ ವಿಭಾಗದಿಂದ ಪಡೆದುಕೊಂಡು ದಾಖಲಾತಿ

ಪರಿಶೀಲಿಸಿದಾಗ ಗಾಯಾಳುವಿನ ತಲೆ ಬುರುಡೆಯಲ್ಲಿ ತುಂಬಾ ಕಡೆಯಲ್ಲಿ ರಕ್ತಸ್ರಾವವಾಗಿದ್ದು ಮತ್ತು ಬುರುಡೆ ಫ್ರ್ಯಾಕ್ಚರ್ ಆಗಿದ್ದು ಕಂಡು ಬಂದಿತ್ತು. ಸದ್ರಿ ಆಧಾರದ ಮೇಲೆ ನಾನು ಗಾಯವು ತೀವ್ರ ಸ್ವರೂಪದ ಗಾಯ ಅಂತ ನಾನು ಗಾಯದ ಪ್ರಮಾಣ ಪತ್ರದಲ್ಲಿ ಕಾಣಿಸಿ ಅದನ್ನು ತನಿಖಾಧಿಕಾರಿಯವರಿಗೆ ನೀಡಿರುತ್ತೇನೆ. ಸಾಕ್ಷಿ ಸದ್ರಿ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-30 ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-30 ಎ ಎಂದು ಗುರುತಿಸಲಾಯಿತು. ಮು.ಮಾ.1 ರಿಂದ ಗಾಯಾಳುವಿಗೆ ಹಲ್ಲೆಯಾದಲ್ಲಿ ನಿಪಿ-30 ರಲ್ಲಿ ಕಾಣಿಸಿದಂತಹಾ ಗಾಯ ಆ ವ್ಯಕ್ತಿಗೆ ಆಗುವ ಸಾಧ್ಯತೆ ಇರುತ್ತದೆ. ನಾನು ಗಾಯಾಳುವಿನ ಒಳರೋಗಿ ದಾಖಲಾತಿಯನ್ನು ಪರಿಶೀಲಿಸಿದ ನಂತರವೇ ನಿಪಿ-30 ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. ಸಾಕ್ಷಿ ಗಾಯಾಳುವಿನ ಒಳರೋಗಿ ಕಡತವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-31 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ</u> <u>ಆರೋಪಿ ಪರ ಶ್ರೀ ಪಿ ಕೆ ವಕೀಲರಿಂದ</u>

ನಾನು ಗಾಯಾಳುವನ್ನು ಪರೀಕ್ಷೆ ಮಾಡಿದಾಗ ಅವಳ ರಕ್ತದ ಒತ್ತಡ ಸಾಮಾನ್ಯ ಒತ್ತಡಕ್ಕಿಂತ ಹೆಚ್ಚಾಗಿದೆ ಅಂತ ನಾನು ನನ್ನ ವರದಿಯಲ್ಲಿ ಕಾಣಿಸಿದ್ದೇನೆ. ಅದೇ ರೀತಿ ಗಾಯಾಳುವಿನ ಪಲ್ಸ ರೇಟ್ ಸಹಾ ಸಾಮಾನ್ಯ ಪ್ರಮಾಣಕ್ಕಿಂತ ಹೆಚ್ಚಾಗಿದೆ ಅಂತ ನನ್ನ ವರದಿಯಲ್ಲಿ ಕಾಣಿಸಿರುತ್ತೇನೆ ಎಂದರೆ ಸರಿ. ಸಾಮಾನ್ಯ ವ್ಯಕ್ತಿಯ ರಕ್ತದ ಒತ್ತಡ ಹೆಚ್ಚಾಗಿದ್ದಲ್ಲಿ ತಲೆ ಸುತ್ತಿ ಬೀಳುವ ಸಾಧ್ಯತೆ ಇರುತ್ತದೆ ಎಂದರೆ ಸಾಕ್ಷಿ ಹೌದು ಅಂತ ನುಡಿಯುತ್ತಾರೆ. ಸಾಕ್ಷಿ ಮುನ್ನುಡಿದು ನಾನು ಪರೀಕ್ಷೆ ಮಾಡಿದ ಗಾಯಾಳು ಒಂದು ದಿನದ ನಂತರ ನಮ್ಮ ಆಸ್ಪತ್ರೆಗೆ ಬಂದಿದ್ದು ಆಗ ಅವಳ ಒತ್ತಡ ಹೆಚ್ಚಾಗಿ ಕಾಣಿಸಿದ್ದು ಅಂತ ನುಡಿಯುತ್ತಾರೆ. ಸಾಕ್ಷಿಗೆ ವ್ಯಕ್ತಿ ಅಮಲು ಪದಾರ್ಥ ಸೇವಿಸಿದ ಅಮಲಿನಲ್ಲಿ ಮತ್ತು ಬಿ.ಪಿ. ಹೆಚ್ಚಾದಲ್ಲಿ ಆಯ ತಪ್ಪಿ ನೆಲದ ಮೇಲೆ ಬಿದ್ದಾಗ ಮನೆಯಲ್ಲಿ ನೆಲದಲ್ಲಿ ಹೂತು ಹಾಕಿ ಇಟ್ಟಂತಹಾ ಅರೆಯುವ ಕಲ್ಲಿನ ಮೇಲೆ ಬಿದ್ದಾಗ ನಿಪಿ-30 ರಲ್ಲಿ ಕಾಣಿಸಿದ ಗಾಯ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸಾಕ್ಷಿ ಒಂದೇ ಮುಖವಾಗಿ ಬಿದ್ದಾಗ ಎಲ್ಲಿ ಪೆಟ್ಟಾಗುತ್ತದೆ ಅಲ್ಲಿ ಗಾಯ ಆಗುವ ಸಾಧ್ಯತೆ ಇರುತ್ತದೆ. ಆದರೆ ಈ ಪ್ರಕರಣದ ನಾನು ಪರೀಕ್ಷೆ ಮಾಡಿದ ವ್ಯಕ್ತಿಗೆ ಬುರುಡೆಯಲ್ಲಿ ಮಲ್ಟಿಪಲ್ ಹ್ಯಾಮರೇಜ್ ಆಗಿರುವುದರಿಂದ ಆ ರೀತಿ ಗಾಯ ಆಗುವ ಸಾಧ್ಯತೆ ಇರುವುದಿಲ್ಲ ಅಂತ ನುಡಿಯುತ್ತಾರೆ. ವ್ಯಕ್ತಿ ಒಮ್ಮೆ ಬಿದ್ದು ಮತ್ತೆ ಎದ್ದು ಪುನಃ ಮತ್ತೆ ಬಿದ್ದಲ್ಲಿ ಆ ವ್ಯಕ್ತಿಗೆ ನಿಪಿ-30 ರಲ್ಲಿ ಕಾಣಿಸಿದಂತಹಾ ಗಾಯ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸಾಕ್ಷಿ ಆ ವ್ಯಕ್ತಿ ಒಮ್ಮೆ ಬಿದ್ದಾಗ ಅವನಿಗೆ ತೀವ್ರ ಸ್ವರೂಪದ ಗಾಯ ಆದಲ್ಲಿ ಆ ವ್ಯಕ್ತಿ ಪುನಃ ಎದ್ದು ಬೀಳುವ ಸಾಧ್ಯತೆ ಇರುವುದಿಲ್ಲ ಅಂತ ಸಾಕ್ಷಿ ನುಡಿಯುತ್ತಾರೆ. ಯಾವುದೇ ವ್ಯಕ್ತಿಗೆ ಯಾವುದೇ ಸಂದರ್ಭದಲ್ಲಿ

ಬ್ರೇನ್ ಹ್ಯಾಮರೇಜ್ ಆಗುವ ಸಾಧ್ಯತೆ ಇರುತ್ತದೆ. ಮು.ಮಾ.1 ರಿಂದ ಹಲ್ಲೆಯಾದಲ್ಲಿ ನಿಪಿ-30ರಲ್ಲಿ ಕಾಣಿಸಿದ ಗಾಯಗಳು ವ್ಯಕ್ತಿಗೆ ಆಗುವ ಸಾಧ್ಯತೆ ಇಲ್ಲದಿದ್ದರೂ ಸಹಾ ಮತ್ತು ವ್ಯಕ್ತಿ ಆಯ ತಪ್ಪಿ ನೆಲದ ಮೇಲೆ ಒಮ್ಮೆ ಬಿದ್ದು ಪುನಃ ಎದ್ದು ಮತ್ತೆ ಬಿದ್ದಾಗ ನೆಲದ ಮೇಲೆ ಇದ್ದ ರುಬ್ಬುವ ಕಲ್ಲಿಗೆ ಅವನ ತಲೆ ಸಂಪರ್ಕಕ್ಕೆ ಬಂದಾಗ ನಿಪಿ-30 ರಲ್ಲಿ ಕಾಣಿಸಿದ ಗಾಯಾಳು ಆಗುವ ಸಾಧ್ಯತೆ ಇದ್ದರೂ ಸಹಾ ಆ ರೀತಿ ಗಾಯಾಳು ಆಗುವುದಿಲ್ಲ ಅಂತ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ. ಒಬ್ಬ ವ್ಯಕ್ತಿಗೆ ರಕ್ತದ ಒತ್ತಡ ಹೆಚ್ಚಾದಲ್ಲಿ ಆ ವ್ಯಕ್ತಿಯ ಬ್ರೇನ್ ಹ್ಯಾಮರೇಜ್ ಆಗುವ ಸಾಧ್ಯತೆ ಇರುತ್ತದೆ ಎಂದರೆ ಇರಬಹುದು.

<u>ಮರು ವಿಚಾರಣೆ</u>ಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೆ ಸರಿ ಇದೆ.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**